ದಿನಾಂಕಃ 14-06-2024 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ

ನಾನು ಹಾಜರಪಡಿಸಿರುವ ನಿಪಿ–1ರಲ್ಲಿ ಖಾನೆ ಸುಮಾರಿ ನಂ 404/ಡಿ ಎಂದು ನಮೂದು ಇದೆ ಎಂದರೆ ಸರಿ. ಸದರಿ ಖಾನೆ ಸುಮಾರಿ ನಂ 404/ಡಿ ನನ್ನ ಅಜ್ಜನಾದ ಗೌಡ್ರ ಹನುಮಂತಪ್ಪನವರ ಹೆಸರಿಗೆ ಪಂಚಾಯತಿ ದಾಖಲೆಗಳಲ್ಲಿ ನಮೂದು ಇದೆ ಎಂದರೆ ಸರಿ. ಸದರಿ ಪಂಚಾಯತಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತಮ್ಮ ಪರವಾಗಿ ಹಾಜರುಪಡಿಸಿದ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ ತಾನು ಹೇಳಿದಂತಹ ಪಂಚಾಯತಿ ದಾಖಲೆಗಳು ಇಲ್ಲ ಎಂದು ನೋಡಿ ಖಚಿತಪಡಿಸಿಕೊಂಡಿರುತ್ತಾರೆ. ಅದೇ ರೀತಿ ಖಾನೆ ಸುಮಾರಿ ನಂ 404/ಡಿ ಯ ವಿಸ್ತೀರ್ಣವನ್ನು ತೋರಿಸಲು ಪಂಚಾಯತಿ ದಾಖಲೆಗಳಲ್ಲಿ ನಮೂದು ಇದೆಯೇ ಎಂದರೆ ಸಾಕ್ಷಿ ನಮೂದು ಇದೆ ಸದರಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಖಾ.ನಂ. 404/ಡಿ, 404/ಸಿ ಎಂದು ಯಾವಾಗ ಬದಲಾಯಿತು ಎಂದರೆ ಸಾಕ್ಷಿ ಬದಲಾವಣೆಯಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ–1ರಲ್ಲಿ ನಮೂದಿಸಿರುವ ಷೆಢ್ಯೂಲ್ ಆಸ್ತಿಯ ವಿವರ ಸುಳ್ಳು ಎಂದರೆ ಸರಿಯಲ್ಲ. ನಿಪಿ–1ರ ಸಮಯಕ್ಕೆ ನಾವು ಪ್ರತಿವಾದಿಗಳ ಆಸ್ತಿಯನ್ನು ಸೇರಿಸಿ ನಿಪಿ–1ರಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ. ಖಾ.ನಂ 404/ಡಿ ರ ಆಸ್ತಿ ಅಸ್ತಿತ್ವದಲ್ಲಿದ ಕಾರಣ ಪಂಚಾಯತಿ ದಾಖಲೆಗಳಲಿಲ ನಮೂದು ಇಲ್ಲ ಎಂದರೆ ಸರಿಯಲ್ಲ.

ಈ ದಾವೆ ಸಾಕ್ಷಿಗೆ ಈ ಗಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ 819/404/ಸಿ ಯ ಈ ಸ್ವತ್ತಿನ ದಾಖಲೆಯಾಗಿದ್ದು ಸದರಿ ದಾಖಲೆ 5 ನೇ ಪ್ರತಿವಾದಿ ಮತ್ತು 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ನಮೂದಾಗಿದೆ ಎಂದು ಸಾಕ್ಷಿ ನೋಡಿ ಒಪ್ಪಿರುತ್ತಾರೆ ಮುಂದುವರೆದು ಸದರಿ ದಾಖಲೆ ಯನ್ನು ಪಹಣಿಯಾಧಾರದ ಮೇಲೆ ಪಂಚಾಯತಿಗೆ ಸಲ್ಲಿಸಿ ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿ ಒಪ್ಪಿದ ಮೇರೆಗೆ **ನಿಡಿ–3** ಎಂದು ಗುರುತಿಸಲಾಯಿತು. ಈ ಸ್ವತ್ತು ದಾಖಲೆ ಖಾಯಂ ದಾಖಲೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಸದರಿ ಸ್ವತ್ತಿನ ಈ ಸ್ವತ್ತು ಅಗಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ದಾವಾ ಹೂಡಿದ್ದ ಕಾರಣ ನಾನು ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ,

ಖಾ.ಸು.ನಂ 404/ಡಿ ಮತ್ತು 404/ಸಿ ಎರಡೂ ಆಸ್ತಿಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಖಾ.ಸು.ನಂ 404/ಸಿ ಯಲ್ಲಿ ಸಿ1,ಸಿ2,ಸಿಬಿ. ಎಂಬ ಆಸ್ತಿಗಳು ಸಹ ಸೇರಿವೆ ಎಂದರೆ ಸರಿಯಲ್ಲ. ನಾನು 1999ರಲ್ಲಿ ಖಾ.ಸು.404 ಕ್ಕೆ ಸಂಬಂದಿಸಿದಂತೆ ಪಂಚಾಯಿತಿಯಲ್ಲಿ ಇಟ್ಟಿರುವ

ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾಸ್ತಿಯಲ್ಲಿ ಅಸ್ತಿತ್ವದಲ್ಲಿರುವ ಮನೆ ಸುಮಾರು 75–50 ವರ್ಷ ಹಳೆಯದು ಎಂದರೆ ಸರಿಯಲ್ಲ. ಸದರಿ ಮನೆ 40 ವರ್ಷದ ಹಿಂದಿನದು ಎಂದು ನುಡಿಯುತ್ತಾರೆ. ಸದರಿ ದಾವಾಸ್ತಿ ಪ್ರತಿವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದಂತ ಆಸ್ತಿ ಎಂದರೆ ಸರಿಯಲ್ಲ. ಹಾಗಾಗಿ ಸದರಿ ದಾವಾಸ್ತಿ ಪಾಡೀಗೆರೆ ಚನ್ನಬಸಪ್ಪರವರ ತಂದೆಯಿಂದ ಪಾಡಿಗೆರೆ ಚನ್ನಬಸಪ್ಪನವರಿಗೆ ಬಂದಿದ್ದು ಅವರ ಮರಣಾನಂತರ ಅವರ ಹೆಂಡತಿಯಾದ ತೊಳಸಮ್ಮನವರು ಹೆಸರಿಗೆ ಬಂದಿದ್ದು ಸದರಿ ತೊಳಸಮ್ಮ ಮೃತಪಟ್ಟ ನಂತರ ಜಯಪ್ಪ ಮತ್ತು 5 ನೇ ಪ್ರತಿವಾದಿಯಾದ ಕರಿಯಮ್ಮನವರ ಹಸೆರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ದಾವಾಸ್ತಿ ಪ್ರತಿವಾದಿಗಳ ಮೂಲ ಪುರುಷನಿಂದ ಅವರ ವಾರಸುದಾರರಿಗೆ ಒಬ್ಬರ ನಂತರ ಒಬ್ಬರಂತೆ ತಲೆಮಾರುಗಳಿಂದ ಬಂದಿದೆ ಎಂರೆ ಸರಿಯಲ್ಲ.

ನಾನು ಈ ದಾವೆಯನ್ನು ಸ್ವಾಧೀನಬಿಡಿಸಿಕೊಡಲು ಹೂಡಿದ್ದೆನೆ ಎಂದರೆ ಸರಿ. ಆಗಿದ್ದರೆ ದಾವಾಸ್ತಿಯ ಸ್ವಾಧೀನವನ್ನು ಪ್ರತಿವಾದಿಗಳಿಗೆ ಯಾರು ಕೊಟ್ಟರು ಎಂದರೆ ಸಾಕ್ಷಿ ನಮ್ಮ ಅಜ್ಜಿ ಯಾದ ಲಕ್ಕಮ್ಮನವರು ಅವರ ತಮ್ಮನಾದ ಚನ್ನಬಸಪ್ಪನವರಿಗೆ ಸುಮಾರು 25 ವರ್ಷಗಳ ಹಿಂದೆ ಇರಲು ಕೊಟ್ಟಿರುತ್ತಾರೆ. ಸದರಿ ವಿಚಾರದ ಕುರಿತು ನನ್ನ ದಾವೆಯಲ್ಲಾಗಲಿ ಅಥವಾ ನನ್ನಮುಖ್ಯ ವಿಚಾರಣಾ ಪ್ರ.ಪತ್ರದಲ್ಲಾಗಲಿ ನಮೂದಿಸಿರುವುದಿಲ್ಲ. ಎಂದರೆ ಸರಿ. ಸದರಿ ವಿಚಾರವನ್ನು ಈ ದಾವೆ ಹೂಡುವ ಪೂರ್ವ ಕೊಟ್ಟ ನೋಟಿಸಿನಲ್ಲಿಯೂ ಸಹ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ನಿಪಿ–1 ಕ್ಕೆ ಚೆನ್ನಬಸಪ್ಪನವರಾಗಲಿ ಅಥವಾ ಆತನ ಹಿರಿಯರಾಗಲಿ ಪಕ್ಷಗಾರರಾಗಿ ಸಹಿ ಮಾಡಿಲ್ಲ ಎಂದರೆ ಸರಿ. ಹಾಗಾಗಿ ನಾನು ಈ ದಾವೆಯಲ್ಲಿ ನಮೂದಿಸಿರುವ ಆಸ್ತಿ ಸದರಿ ನಿಪಿ–1 ರಲ್ಲಿ ನಮೂದಿಸಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಚೆಕ್ಕುಬಂದಿಗಳನ್ನು ಮತ್ತು ಅಳತೆಗಳನ್ನು ಸುಳ್ಳಾಗಿ ನಮೂದಿಸಿರುವ ಆಧಾರದ ಮೇಲೆ ನಾನು ಈ ಸುಳ್ಳು ದಾವೆಯನ್ನು ಹೂಡಿದ್ದೆನೆ ಎಂದರೆ ಸರಿಯಲ್ಲ. ಹಾಗಾಗಿ ದಾವಾಸ್ತಿಯಲ್ಲಿ ನನಗಾಗಲಿ ಅಥವಾ ನನ್ನ ಕುಟುಂಬದ ಹಿರಿಯರಿಗಾಗಲಿ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ನನ್ನ ಅನುಭದಲ್ಲಿರುವ ಆಸ್ತಿ ಪೂರ್ವ– ಪಶ್ಚಿಮ 105 ಅಡಿ ಉತ್ತರ – ದಕ್ಷಿಣೆ 87 ವರೆ ಅಡಿ ಇದೆ. 2020 ನೇ ಸಾಲಿನಿಂದ ನಿವೇಶನಗಳ ಬೆಲೆ ಹೆಚ್ಚಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವಾ ಹೂಡುವ ಸಮಯಕ್ಕೆ ದಾವಾಸ್ತಿಯ ಮಾರುಕಟ್ಟೆ ಮೌಲ್ಯಗಳನ್ನು ಎಷ್ಟು ಮೌಲ್ಯಾಂಕನ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ, ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನಿರ್ವಹಿಸಿರುವ ಮಾರುಕಟ್ಟೆ ಮೌಲ್ಯದ ವಹಿಯ ಪ್ರಕಾರದ ಬೆಲೆಗೂ ಮುಕ್ತ ಮಾರುಕಟ್ಟೆಯ ಬೆಲೆಗೂ ವ್ಯತ್ಯಾಸವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2019–20 ರಿಂದ ಸಂತೆಬೆನ್ನೂರು ಗ್ರಾಮದಲ್ಲಿ ನಿವೇಶನದ ಬೆಲೆ ಪ್ರತಿ

ಚದರ ಮೀಟರ್ ಗೆ 3500 ರಿಂದ 4500 ಸರ್ಕಾರದ ಮೌಲ್ಯ ಇದೆ ಎಂದರೆ ಸರಿಯಲ್ಲ. ನನ ಪ್ರಕಾರ ಒಂದ ಚದರ ಮೀಟರ್ ಗೆ 1500 ರೂ ಇದೆ. ಸದರಿ ಮಾರುಕಟ್ಟೆ ಮೌಲ್ಯದಂತೆಯೂ ಸಹ ನಾನು ನ್ಯಾಯಾಲಯದ ಶುಲ್ಕವನ್ನು ಭರಿಸಿಲ್ಲ ಎಂದರೆ ಸರಿ. ಹಾಗಾಗಿ ಸೂಕ್ತ ನ್ಯಾಯಾಲಯದ ಶುಲ್ಕವನ್ನು ಕಟ್ಟುವುದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮಾರುಕಟ್ಟೆ ಮೌಲ್ಯವನ್ನು ಕಡಿಮೆ ಮೌಲ್ಯಾಂಕನ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ನೀಡಿರುವ ಅಳತೆ ಪ್ರಕಾರ ಪೂರ್ವ–ಪಶ್ಚಿಮ 35 ಗಜ, ಉತ್ತರ –ದಕ್ಷಿಣ 25 ಗಜ ಎಂದರೆ ಒಟ್ಟು 491 ಚದರ ಮೀಟರ್ ಅಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಹೂಡುವ ಸಮಯಕ್ಕೆ ನಾನು ದಾವಾಸ್ತಿಯ ಈ ಸ್ವತ್ತನ್ನು ನೋಡಿರುತ್ತೇನೆ. ಸದರಿ ಈ ಸ್ವತ್ತೆ ನಿಡಿ–3 ಎಂದರೆ ಸರಿ. ನಿಡಿ–3 ರಲ್ಲಿ ನಮೂದಿಸಿರುವ ಅಳತೆ ಸರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

ನಾನು ದಾವಾಸ್ತಿ ಮೇಲಿನ ಮುಕ್ತ ಮಾರುಕಟ್ಟೆ ಮೌಲ್ಯವನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ .ಹಾಗಾಗಿ ದಾವಾಸ್ತಿಯಲಿಲ ಪ್ರತಿವಾದಿಗಳು ಅವರ ಪೂರ್ವಜರ ಕಾಲದಿಂದಲೂ ಸಹ ಸ್ವಾಧೀನಾನುಭವ ಹೊಂದಿ ತಮ್ಮ ಸ್ವಂತ ಹಕ್ಕಿನಿಂದಲೇ ಅನುಭವಿಸುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಹಾಗಾಗಿ ನಮ್ಮ ಕುಟುಂಬದವರ ಅಥವಾ ನಮ್ಮ ಕುಟುಂಬದ ಹಿರಿಯರ ಯಾರ ಅನುಮತಿಯ ಮೇಲಿಯೂ ಸಹ ದಾವಾಸ್ತಿಯಲ್ಲಿ ಪ್ರತಿವಾದಿಗಳು ಅನುಭವದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಕೇವಲ ನಿಪಿ–1 ರಲ್ಲಿ ನಮುದಿಸಿರುವ ಸುಳ್ಳು ಚೆಕ್ಕುಬಂದಿಗಳು ಹಾಗೂ ಅಳತೆಗಳ ಆಧಾರದ ಮೇಲೆ ಮತ್ತು ಪ್ರತಿವಾದಿಗಳಿಗೆ ಸೇರಿದ ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.** ಸರಿ ಇದೆ.

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.